ಅಂತಂದ್ರಲ್ಲ' ಅಂದು ನಾನು ನೇರವಾಗಿ ವಿಚಾರಕ್ಕೆ ಬಂದೆ.

ಮಾತಿಲ್ಲದೆ ಕೂತಳು.

'ಪಾಲಣ್ಣ ತೀರ್ಕಂಡ ಮ್ಯಾಲೆ ಆದ ಸಂಬಂಧನ?

ಮಾದೇವಿ ನನ್ನ ಮುಖವನ್ನೇ ನೋಡಿದಳು.

'ಒಳ್ಳೇದೆ ಮಾಡ್ದೆ, ಅವನೂರ್ಗೆ ಹೋಗ್ಬಿಡು ಮತ್ತೆ' ಅಂದೆ.

'ಊರವ್ರು ಬಿಡ್ತಿಲ್ಲ.'

'ಅದ್ಯಾಕೆ ಬಿಡ್ತಿಲ್ಲ.'

'ಬಿಡ್ತಿಲ್ಲ ಅಂದ್ರೆ ಊರ್ ಪಂಚಾಯ್ತಿದಾರ್ರು ಹಿರೀಕರು, ಮುದುಕರು ಮೋಟರಿಗೆಲ್ಲ ನನ್ನ ಬದುಕುಸ್ಬೇಕು ಅಂತ ಬಾಳ ಪ್ರೀತಿ ಬಂದ್ಬುಟ್ಟದೆ' ಅಂದು ನಕ್ಕಳು. ಮುಂದುವರೆದು 'ತಮ್ಮಣ್ಣನವರಂತೂ ನನ್ನ ಮದಲ್ನೇ ಹೆಣ್ತಿ ಅಂತ್ಲೆ ನೋಡ್ಕಂತರಂತೆ. ಪೂಜಾರಪ್ಪನೂ ಅಷ್ಟೆ. ನಂಗೋಸ್ಕರ ಬೇಕಾದ್ರೆ ಕಟ್ಕಂಡೆಂಡ್ತಿನೂ ಬಿಡಕೆ ತಯಾರವ್ರಂತೆ. ನಂಗೆ ಯಾರ್ಮೇಲೂ ಇಷ್ಟವಿಲ್ಲ. ಕಲ್ಲಜ್ಜನ ಮೇಲೆ ಇಷ್ಟ. ಅವ್ನಗೆ ಮೂರ್ನೆ ಹೆಂಡ್ರಾಗಿ ಹೋಗ್ಬಿಡಾನ ಅನ್ಕಂಡಿದೀನಿ' ಅಂದು ನಕ್ಕಳು. ರಾತ್ರಿ ಪಂಚಾಯ್ತಿ ಕಟ್ಟೆಯಲ್ಲಿ, ಶಕ್ತಿ ಇದ್ದರೆ ಕೆಟ್ಟು ನಿಂತ ಮಾದೇವಿಯ ಮಂಡೆ ಚೆಂಡು ತುಂಡು ಮಾಡಿಬಿಡುತ್ತಿದ್ದನೆಂಬ ಮಾತಾಡಿದ್ದ ಕಲ್ಲಜ್ಜನು ಮದುವೆಯಾದ ಮೊದಲನೇ ಹೆಂಡತಿಗೆ ಮಕ್ಕಳಿರಲಿಲ್ಲ, ತನ್ನಲ್ಲಿಗೇ ವಂಶ ನಿರ್ವಂಶವಾಗಬಾರದೆಂದು ಎರಡನೇ ಹೆಂಡತಿಯನ್ನು ನಲವತ್ತನೇ ವಯಸ್ಸಿನಲ್ಲಿ ಕಟ್ಟಿಕೊಂಡರೆ ಅವಳಲ್ಲಿ ಹುಟ್ಟಿದ ಆರೂ ಹೆಣ್ಣಾದವು. ಕೊನೆಗೂ ತನ್ನ ವಂಶ ಉದ್ಧಾರವಾಗದೇ ಉಳಿಯಿತಲ್ಲ ಎಂದು ಚಿಂತಾಕ್ರಾಂತನಾದ ಕಲ್ಲಜ್ಜ ತನ್ನ ಐವತ್ತೈದನೇ ವಯಸ್ಸಿನಲ್ಲಿ ಮೂರನೇ ಲಗ್ನವಾಗಿ ಗಂಡು ಸಂತಾನ ಪಡೆಯುವ ಯೋಚನೆ ಮಾಡಿ, ಅವರಿವರ ಕೈಲಿ ಬೈಸಿಕೊಂಡು ಮುಪ್ಪಿನವನಾಗಿದ್ದ. ಹೀಗಾಗಿ ಆ ಕಲ್ಲಜ್ಜನಿಗೆ ಮೂರನೆಯವಳಾಗಿ ಹೋಗುವೆನೆಂದು ನಕ್ಕ ಮಾದೇವಿ, 'ನಂಗೀಗ ಮೂರ್ತಿಂಗ್ಳು' ಎಂದು ಗಂಭೀರವಾದಳು.

ಮುಂದೆ ಏನೇನೋ ಮಾತಾಡಬೇಕೆನಿಸಿದರೂ ಮಾತಿಲ್ಲದೆ ಒಂದು ಘಳಿಗೆ ಕೂತೆ. 'ಸರಿ, ನಾನು ಚಿರತೆ ಬಯಲಿಗೋಗಿ ಗಿರಿಯನ್ನು ಕರ್ಕಂಡು ಬರ್ತೀನಿ. ನಾಳೆ ಹಬ್ಬ, ಹಬ್ಬದ ದಿನವೇ ಎಲ್ರ ಮುಂದೆನೆ ಅವನಿಂದೆ ಹೋಗ್ಬಿಡು, ಆಮೇಲೆ ಯಾರು ಏನ್ಮಾಡ್ತರೋ ನೋಡನ' ಅಂದೆ. ಮಾದೇವಿ ಸುಮ್ಮನಿದ್ದಳು. ನಾನು ಎದ್ದು ಹೊರಬಂದೆ. ಇನ್ನೇನು ಅರ್ಧ ರಾತ್ರಿಯ ಭಯಂಕರತೆ ಕಳೆದು, ಅಲ್ಲಲ್ಲಿ ಹಕ್ಕಿಪಕ್ಷಿಗಳ ಸದ್ದು ಆರಂಭವಾಗುತ್ತ ಹೆಂಗಸರು ಬಾವಿ ನೀರು ಸೇದಿ ನಡುವಿನ ಮೇಲಿಟ್ಟು ತುಳುಕಿಸಿಕೊಂಡು ಬರುವುದು ಕೇಳಿಸುತ್ತ ವಾತಾವರಣದಲ್ಲಿ ಮುಂಜಾವಿನ ಸೌಂದರ್ಯ ಮೂಡುತ್ತಿತ್ತು.

ನಾನು ಮಾದೇವಿಯ ಮನೆಯಿಂದಲೇ ಹೊರಟು ಚಿರತೆ ಬಯಲು ಸೇರುವಷ್ಟೊತ್ತಿಗೆ ಮೂಡಲಲ್ಲಿ ಹೊತ್ತು ಮೂಡಿ ಮೂರು ಮಾರು ಏರಿತ್ತು. ಗಿರಿಯನ ಮನೆ ಮುಂದೆ ಬಂದರೆ ಬಾಗಿಲು ಬೀಗ ಹಾಕಿತ್ತು. ಅಜುಬಾಜಿನ ಹೈಕಳು ಅವನು ಆಡು ಬಿಟ್ಟುಕೊಂಡು ಅಷ್ಟು ಹೊತ್ತಿಗೇ ಹೋದನೆಂದು, ಹಳ್ಳದ ದಂಡೆಯಲ್ಲಿ ಅವುಗಳ ಮೇಯಿಸುತ್ತ ನಿಂತಿರಬಹುದೆಂದು ಹೇಳಿದರು. ಊರಿನ ತೆಂಕು ದಿಕ್ಕಿಗೆ ಹರಿಯುತ್ತಿದ್ದ ಹಳ್ಳ ಸೇರಿ ಅದರ ದಂಡೆಗೇ ಒಂದೆರಡು ಕೂಗಳತೆ ದೂರ ನಡೆದರೆ ಅಲ್ಲೆಲ್ಲ ಆಡುಗಳು ಮೇಯುವುದು ಕಂಡಿತೇ ಹೊರತು ಗಿರಿಯ ಮಾತ್ರ ಕಾಣಿಸಲಿಲ್ಲ. ಹಳ್ಳದ ದಂಡೆಗೇ ಅಲ್ಲೊಂದು ಬಾವಿ. ಆ ಕಪಿಲೆ ಬಾವಿಯ ದಿಣ್ಣೆ ಹತ್ತಿ ಗಂಟಲು ದಪ್ಪ ಮಾಡಿ ಕೂಗಿದೆ. ಆ ದಿಣ್ಣೆಯ ಕೆಳಗೇ ಇದ್ದ ಗುಡಿಸಲ ಒಳಗಿಂದ ಗಿರಿಯ ಈಚೆ ಬಂದ. ಒಂದು ಚಡ್ಡಿ,